ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ
ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 191/2020. P.W.-1.

ದಿನಾಂಕಃ25-05-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಃ ಆರೋಪಿ ಪರ ಶ್ರೀ ಟಿ ಕೆ ಎನ್ ವಕೀಲರಿಂದಃ-

ನನ್ನ ತಂದೆ ಹೆಸರು ಮುನಿಸ್ವಾಮಿ ಎಂದರೆ ಸರಿ. ಸದರಿಯವರಿಗೆ ಲಕ್ಷ್ಮೀ ಎಂಬ ಮಗಳು ಇದ್ದಾರೆ ಎಂದರೆ ಸರಿ. ಸದರಿ ಲಕ್ಷ್ಮೀಯವರಿಗೆ ಶರತ್ ಕುಮಾರ್ ಎಂಬ ಮಗ ಇದ್ದಾರೆ ಎಂದರೆ ಸರಿ. ನನ್ನ ಅಕ್ಕ ಲಕ್ಷ್ಮೀಯನ್ನು ಬೆಂಗಳೂರಿಗೆ ಕೊಟ್ಟು ವಿವಾಹ ಮಾಡಿರುತ್ತಾರೆ ಎಂದರೆ ಸರಿ. ನನಗೆ ಮಾಸಿಕ ರೂ.30,000 ರಿಂದ 35,000 ಹಣ ಬಾಡಿಗೆಯಿಂದ ಬರುತ್ತದೆ, ನನಗೆ ಇರುವ ಟ್ರಾವೆಲ್ಸ್ ನಿಂದ ವಾರ್ಷಿಕ ರೂ.3 ಲಕ್ಷ ಆದಾಯ ಸಿಗುತ್ತದೆ ಹಾಗೂ ನಾನು ಬೈಕ್ ಮೆಕಾನಿಕ್ ಕೆಲಸ ಹಾಗೂ ನನ್ನ ಸ್ವಂತ ಅಂಗಡಿಯಿಂದ ಮಾಸಿಕ ರೂ.50 ಸಾವಿರ ಆದಾಯ ಸಿಗುತ್ತದೆ. ನನಗೆ ನನ್ನ ತೋಟದ ಸರ್ವೆ ನಂಬರ್ ಗೊತ್ತಿಲ್ಲ. ನನ್ನ ತೋಟದ ಪೂರ್ವದ ಚೆಕ್ಕುಬಂದಿ ಗೊತ್ತಿಲ್ಲ, ಪಶ್ಚಿಮಕ್ಕೆ ಹೊನ್ನೆಗೌಡರ ಜಮೀನು, ಉತ್ತರ ಮತ್ತು ದಕ್ಷಿಣದ ಚೆಕ್ಕುಬಂದಿ ಗೊತ್ತಿಲ್ಲ. ನಾನು ಆದಾಯ ತೆರಿಗೆ ಪಾವತಿಸುತ್ತೇನೆ. ನನ್ನ ಆದಾಯ ತೆರಿಗೆ ಪಾವತಿ ಸಂಖ್ಯೆ ನನಗೆ ನೆನಪಿಲ್ಲ.

ನಾನು ದಿಃ20.09.2019 ರಂದು ಆರೋಪಿಗೆ ರೂ.7,50,000 ಹಣವನ್ನು ಕೊಟ್ಟಿರುತ್ತೇನೆ. ನಾನು ಅರ್ಧ ಹಣವನ್ನು ಬ್ಯಾಂಕಿನಿಂದ ಮತ್ತು ಉಳಿದ ಹಣವನ್ನು ನನ್ನ ಕೈಯಲ್ಲಿ ಇದ್ದ ಮತ್ತು ಬೇರೆಯವರಿಂದ ಪಡೆದ ಹಣದಿಂದ ಕೊಟ್ಟಿರುತ್ತೇನೆ. ನಾನು ನನ್ನ ಸ್ನೇಹಿತ ರಮೇಶ್ ರವರ ಬಳಿ ಸದರಿ ಹಣವನ್ನು ಪಡೆದುಕೊಂಡಿರುತ್ತೇನೆ. ಸದರಿ ರಮೇಶ್ ರವರ ತಂದೆ ಹೆಸರು ನನಗೆ ಗೊತ್ತಿಲ್ಲ. ಅವರು ರಾಮನಹಳ್ಳಿ ವಾಸಿಯಾಗಿರುತ್ತಾರೆ. ಸಾಲ ಕೊಡುವಾಗ ಸಾಲ ತೀರಿಸುವ ಶಕ್ತಿ ಇದ್ದರೆ ಮಾತ್ರ ಕೊಡುತ್ತಾರೆ ಎಂದರೆ ಸರಿ. ಆರೋಪಿಗೆ 4 ಎಕರೆ ಜಮೀನು, ಸ್ವಂತ ಮನೆ ಹಾಗೂ ಮುಕ್ಕಾಲು ಎಕರೆ ಅಡಿಕೆ ತೋಟ ಇದೆ. ಆರೋಪಿಗೆ ಆಸ್ತಿ ಇರುವ ಬಗ್ಗೆ ದಾಖಲೆಗಳನ್ನು ನೀಡಲು ತೊಂದರೆ ಇರುವುದಿಲ್ಲ ಎಂದರೆ ಸರಿ. ನನಗೆ ಆರೋಪಿಯು ಕರ್ನಾಟಕ ಬ್ಯಾಂಕಿನ ಚೆಕ್ ಸಂಖ್ಯೆ

879802 ಅನ್ನು ನೀಡಿರುತ್ತಾರೆ. ನಾನು ಆರೋಪಿಯಿಂದ 3 ಖಾಲಿ ಚೆಕ್ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಶಾಂತ್‌ಕುಮಾರ್ ರವರ ಮೂಲಕ ಆರೋಪಿಯ ವಿರುದ್ಧ ಬೆಂಗಳೂರಿನಲ್ಲಿ ಮತ್ತೊಂದು ಚೆಕ್ ಕೇಸನ್ನು ದಾಖಲಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸುಬ್ರಮಣ್ಯ ಮತ್ತು ಎಸ್.ಆರ್.ಮಂಜುಳಾ ಎಂಬುವವರು ಆರೋಪಿ ಮೋಹನನಿಗೆ ರೂ.6 ಲಕ್ಷ ಚೆಕ್ ಹಣಕ್ಕಾಗಿ ನೋಟೀಸು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇಸು ದಾಖಲಿಸಲು ನಾನು ಕೊಟ್ಟಂತಹ ಚೆಕ್ ಕಾರಣ ಎಂದರೆ ಸರಿಯಲ್ಲ.

ನಾನು ಕೊಟ್ಟ ನೋಟೀಸಿಗೆ ಆರೋಪಿ ಮೋಹನ ನಾನು ಸ್ವಲ್ಪ ಹಣ ಕೊಡಬೇಕು ಎಂದು ಒಪ್ಪಿ ಉತ್ತರವನ್ನು ನೀಡಿರುವ ವಿಚಾರ ನನಗೆ ಗೊತ್ತು. ಸ್ವಲ್ಪ ಹಣ ಎಂದರೆ ರೂ.50,000 ಎಂದರೆ ಸರಿಯಲ್ಲ. ರೂ.7,50,000 ಹಣಕ್ಕೆ ಖಾಲಿ ಚೆಕ್ ಬಿಟ್ಟರೆ ನನ್ನ ಬಳಿ ಬೇರೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನಿಪಿ1 ನ್ನು ಆರೋಪಿ ತುಂಬಿಕೊಂಡು ಬಂದಿದ್ದರು ಮತ್ತು ನನ್ನ ಎದುರಿಗೆ ಅವರು ತಮ್ಮ ಸಹಿಯನ್ನು ಮಾಡಿರುತ್ತಾರೆ. ನಾನು ನಿಪಿ1 ನ್ನು ನನ್ನ ಸ್ನೇಹಿತರ ಮೂಲಕ ತುಂಬಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ1 ರ ಮೇಲಿನ ದಿನಾಂಕ 20.12.2019. ನಿಪಿ1 ರಲ್ಲಿ ದಿಃ06.12.2021 ಎಂದು ಬರೆದು ಒಡೆದುಹಾಕಿರುವುದನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಈ ನ್ಯಾಯಾಲಯದಲ್ಲಿ ಚೆಕ್ಕುಗಳ ಆಧಾರದ ಮೇಲೆ 2-3 ಪ್ರಕರಣಗಳನ್ನು ನಾನು ದಾಖಲಿಸಿರುತ್ತೇನೆ. ಸಿ.ಸಿ.847/2021 ಅನ್ನು ಜಯಸುಂದರ ಎನ್ನುವವರ ಮೇಲೆ ಹಾಕಿರುತ್ತೇನೆ ಎಂದರೆ ಸರಿ. ಕೋಡಿಹಳ್ಳಿ ಗ್ರಾಮದ ರಾಮೇಗೌಡ ಎನ್ನುವವರ ಮೇಲೆ ರೂ.2 ಲಕ್ಷ ಹಣಕ್ಕೆ ಚೆಕ್ ಪ್ರಕರಣ ಹಾಕಿರುತ್ತೇನೆ ಎಂದರೆ ಸರಿ. ನಾನು ಆರೋಪಿಗೆ ಸಾಲ ನೀಡುವಾಗ ಸದರಿ ರಾಮೇಗೌಡ ರವರಿಂದ ಹಣ ತೆಗೆದುಕೊಂಡು ಬಂದಿರುತ್ತೇನೆ ಎಂದರೆ ನಾನು ರಮೇಶ್ ರವರಿಂದ ಪಡೆದು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಬೇರೆ ಇನ್ನಾವುದೇ ಪ್ರಕರಣವನ್ನು ಈ ನ್ಯಾಯಾಲಯದಲ್ಲಿ ದಾಖಲಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಪಾಂಡುರಂಗಪ್ಪ ಎಂಬುವವರ ಮೇಲೆ ಒಂದು ಚೆಕ್ ಕೇಸ್ ಅನ್ನು ರೂ.2 ಲಕ್ಷ ಹಣಕ್ಕಾಗಿ ದಾಖಲು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಹೆಂಡತಿ ಹೆಸರು ಸವಿತಾ ಎಂದರೆ ಸರಿ. ನನ್ನ ಹೆಂಡತಿ ಸಹ ಚಂದ್ರಪ್ಪ ರವರ ವಿರುದ್ಧ ರೂ.5 ಲಕ್ಷ ಹಣಕ್ಕಾಗಿ ಚೆಕ್ ಕೇಸು ಹಾಕಿರುತ್ತಾರೆ ಎಂದರೆ ಸರಿ. ಆರೋಪಿಯು ನಾನು

ಕೊಟ್ಟ ನೋಟೀಸಿಗೆ ರೂ.50 ಸಾವಿರ ಮತ್ತು ಬಡ್ಡಿ ಹಣವನ್ನು ಮಾತ್ರ ಕೊಡಬೇಕು ಎಂದು ಉತ್ತರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹಂಡತಿಗೆ ಬಟ್ಟೆ ಹೊಲಿಯುವುದರಿಂದ ಮತ್ತು ಬಟ್ಟೆ ಮಾರಾಟದಿಂದ ಆಕೆಗೆ ಮಾಸಿಕ ರೂ.20 ಸಾವಿರ ಆದಾಯವಿದೆ. ಸದರಿ ಮಾರಾಟಕ್ಕೆ ಅವರು ಪುರಸಭೆಯಿಂದ ಪರವಾನಗಿ ಪಡೆದಿರುವುದಿಲ್ಲ.

ದಿಃ21.12.2019 ರಂದು ನಿಪಿ2 ನ್ನು ಕೊಟ್ಟಿರುತ್ತಾರೆ. ಸುಮಾರು ವರ್ಷಗಳ ಹಿಂದಿನಿಂದಲೂ ನನ್ನಿಂದ ರೂ.50 ಸಾವಿರ ಹಣ ಪಡೆದು ಆರೋಪಿಯು ಬಡ್ಡಿ ಕೊಡುತ್ತಿರುತ್ತಾರೆ ಎಂದರೆ ಸರಿಯಲ್ಲ. ನಾನು 4-5 ಜನಕ್ಕೆ ಸಾಲ ಕೊಡಲು ಪರವಾನಗಿ ಪಡೆದಿರುತ್ತೇನೆಯೇ ಎಂದರೆ ನಾನು ಕೊಟ್ಟಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಯು ಆತನ ಜಮೀನು ಅಭಿವೃದ್ಧಿ ಮತ್ತು ಅಡಿಕೆ ವ್ಯಾಪಾರಕ್ಕೆ ಹಣದ ಅವಶ್ಯಕತೆ ಇದೆ ಎಂದು ನನಗೆ ತಿಳಿಸಿದ್ದರು. ಆರೋಪಿಯು ಅಡಿಕೆ ವ್ಯಪಾರ ಮಾಡದಿದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಕುಟುಂಬದಲ್ಲಿ 4 ಜನ ಅಕ್ಕ-ತಂಗಿಯರು ಮತ್ತು ಆರೋಪಿ ಒಬ್ಬನೇ ಗಂಡು ಮಗ ಎಂದರೆ ಸರಿ. ಶೇಕಡ 18 ರಂತೆ ಬಡ್ಡಿಯನ್ನು ಕೊಡಲು ಆರೋಪಿಯು ಒಪ್ಪಿದ್ದ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನನ್ನ ಅಣ್ಣ ತ್ರಿಮೂರ್ತಿ ಎಂದು ಇರುತ್ತಾರೆ ಎಂದರೆ ಸರಿ. ಅವರು ಸಣ್ಣ ಅಂಗಡಿ ಇಟ್ಟುಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆಯವರ ಹೆಸರಿನಲ್ಲಿ ಆಸ್ತಿಗಳು ಇತ್ತು , ಅದನ್ನು ವಿಭಾಗ ಮಾಡಿಕೊಟ್ಟಿರುತ್ತಾರೆ. ಅವರಿಗೆ ತಮಿಳುನಾಡುವಿನಲ್ಲಿ ಒಂದು ನಿವೇಶನ, ತರೀಕೆರೆನಲ್ಲಿ 2 ನಿವೇಶನ ಮತ್ತು ಮನೆ ಇತ್ತು. ನನ್ನ ತಂದೆಯವರಿಗೆ ತಮಿಳುನಾಡಿನಲ್ಲಿ ಯಾವುದೇ ನಿವೇಶನ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿಯಿಂದ 3 ಖಾಲಿ ಚೆಕ್ಕುಗಳನ್ನು ಪಡೆದು ರೂ.7,50,000 ಹಣ ಬರಬೇಕು ಎಂದು ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ತನ್ನ ಉತ್ತರ ನೋಟೀಸಿನಲ್ಲಿ ರೂ.50,000 ಹಣವನ್ನು ನೀಡುತ್ತೇನೆ ಎಂದು ಒಪ್ಪಿರುವುದು ಸರಿಯಲ್ಲ ಎಂದು ನಾನು ನನ್ನ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ವಕೀಲರಿಗೆ ಕೇಳಬೇಕು ಎಂದು ನುಡಿಯುತ್ತಾರೆ. ನನ್ನ ಅಕ್ಕನ ಮಗ ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ ತರೀಕೆರೆನಲ್ಲಿ ಅಲ್ಲ ಎಂದರೆ ಸಾಕ್ಷಿಯು ಅವರು ಬಂದು-ಹೋಗಿ ಮಾಡುತ್ತಾನೆ ಎಂದು ನುಡಿಯುತ್ತಾರೆ. ನನ್ನ ಅಕ್ಕನ ಮಗ ತರೀಕೆರೆನಲ್ಲಿ ಯಾವುದೇ ವ್ಯವಹಾರ ಮಾಡುತ್ತಿಲ್ಲ ಎಂದರೆ ಸರಿ. ಆರೋಪಿಯು ರೂ.50,000

ಹಣವನ್ನು ಕೊಡಲು ಮಾತ್ರ ಬಾದ್ಯಸ್ಥನಿರುತ್ತಾನೆ ಎಂದರೆ ಸರಿಯಲ್ಲ. ಸಾಲ ಪಡೆಯಲು ಆರೋಪಿ ಒಬ್ಬರೆ ಬಂದಿದ್ದರು.

ಮರು ವಿಚಾರಣೆಃ ಇಲ್ಲ.
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

ಸಹಿ/-

(ಸಂತೋಷ್ ಕುಮಾರ್ ಪಿ.ಎಸ್ )
ಸಿವಿಲ್ ನ್ಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.